**ಕರ್ನಾಟಕ ಲೋಕಾಯುಕ್ತ**

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಎಂವೈಎಸ್/1568/2019/ಪಿಪಿ ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು,
ದಿನಾಂಕ: 31/12/2020.

**ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ**

ವಿಷಯ: (1) ಶ್ರೀ ಸೋಮಶೇಖರ್ ಸಿ., ಸಹಾಯಕ ಇಂಜಿನಿಯರ್, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ನಂ.3 ಉಪವಿಭಾಗ ಕಾರ್ಕಳ, ಉಡುಪಿ ಜಿಲ್ಲೆ, (2) ಶ್ರೀ ಸಂಗಮೇಶ ಬಣಕಾರ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಶಿರ್ಲಾಲು ಗ್ರಾಮ, ಕಾರ್ಕಳ ತಾಲ್ಲೂಕು, ಉಡುಪಿ ಜಿಲ್ಲೆ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಕುರಿತು ವರದಿ.

*****

1. ದೂರುದಾರರಾದ ಶ್ರೀ ಪ್ರದೀಪ್ ಪೂಜಾರಿ, ಬಿನ್ ಪ್ರಭಾಕರ ಪೂಜಾರಿ, ಭ್ರಾಮರಿ ನಿಲಯ, ಗುಡ್ಡೇಯಂಗಡಿ, ಹಾಡಿಯಂಗಡಿ ಅಂಚೆ, ಶಿರ್ಲಾಲು ಗ್ರಾಮ, ಕಾರ್ಕಳ ತಾಲ್ಲೂಕು, ಉಡುಪಿ ಜಿಲ್ಲೆ, (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಎದುರುದಾರರಾದ (1) ಶ್ರೀ ಸೋಮಶೇಖರ್, ಸಹಾಯಕ ಇಂಜಿನಿಯರ್, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ನಂ.3 ಉಪವಿಭಾಗ ಕಾರ್ಕಳ, ಉಡುಪಿ ಜಿಲ್ಲೆ, (2) ಶ್ರೀ ಸಂಗಮೇಶ ಬಣಕಾರ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಶಿರ್ಲಾಲು ಗ್ರಾಮ, ಕಾರ್ಕಳ ತಾಲ್ಲೂಕು, ಉಡುಪಿ ಜಿಲ್ಲೆ (ಇನ್ನು ಮುಂದೆ ಎದುರುದಾರರೆಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರನ್ನು ಸಲ್ಲಿಸಿರುತ್ತಾರೆ.

2. <u>ದೂರಿನ ಸಾರಾಂಶ:-</u>

ಉಡುಪಿ ಜಿಲ್ಲಾ, ಕಾರ್ಕಳ ತಾಲ್ಲೂಕು, ಶಿರ್ಲಾಲು ಗ್ರಾಮದ, ಸರ್ವೆ ನಂಬರ್ 171/4, 0-15 ಹಾಗೂ ಸರ್ವೆ ನಂಬರ್ 171/6, 0-10 ಎಕರೆ ಸ್ಥಿರಾಸ್ತಿಗಳಲ್ಲಿ ಶ್ರೀ ರಮಾನಂದ ಪಿ. ಇವರು ಅಜೆಕಾರು-ಮಿಯ್ಯಾರು ಜಿಲ್ಲಾ ಮುಖ್ಯ ರಸ್ತೆಯ ರೋಡ್ ಮಾರ್ಜಿನ್ ನಲ್ಲಿಯೇ ಕಟ್ಟಡ ಕಟ್ಟಿದ್ದು ಅಕ್ರಮವಾಗಿ ಮಾಡಿರುವ ಕಾಮಗಾರಿಯನ್ನು ತೆರವುಗೊಳಿಸುವಂತೆ ಕೇಳಿಕೊಂಡಿದ್ದರೂ ಕಾನೂನು ಬಾಹಿರವಾಗಿ ಅಕ್ರಮ ಕಟ್ಟಡ ಕಾಮಗಾರಿಯನ್ನು ಮುಂದುವರೆಸಲು ಹಾಗೂ ಪೂರ್ತಿಗೊಳಿಸಲು ಅವಕಾಶ ಮಾಡಿಕೊಟ್ಟಿದ್ದು ಅಲ್ಲದೆ ಪರವಾನಗಿಯನ್ನು ನೀಡಬಾರದಾಗಿ ಕೇಳಿಕೊಂಡಿದ್ದರೂ ಕಟ್ಟಡಕ್ಕೆ ವಿದ್ಯುತ್ ಸಂಪರ್ಕವನ್ನು ಪಡೆಯಲು ನಿರಾಕ್ಷೇಪಣಾ ಪತ್ರವನ್ನು ನೀಡಿ ಸಂಪೂರ್ಣ ಕರ್ತವ್ಯ ಲೋಪವೆಸಗಿರುವ ಕುರಿತು ತನಿಖೆ ಮಾಡಿ ಕ್ರಮ ಜರುಗಿಸುವಂತೆ ಕೋರಿ ದೂರು ಸಲ್ಲಿಸಿರುತ್ತಾರೆ.

3. <u>1ನೇ ಎದುರುದಾರರ ಪರ ಹೆಚ್.ಕೆ. ಸುಂದರ್., ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಸಲ್ಲಿಸಿದ ಆಕ್ಷೇಪಣೆಗಳು:-</u>

ದಿನಾಂಕ: 19/11/2018 ರಂದು ಅಜೆಕಾರು-ಮಿಯಾರು ಜಿಲ್ಲಾ ಮುಖ್ಯ ರಸ್ತೆಯ ದೈನಂದಿನ ಪರಿವೀಕ್ಷಣೆ ಸಮಯದಲ್ಲಿ ಕಿ.ಮೀ. 7.45 ರ ಬಲಬದಿಯಲ್ಲಿ ಶಿರ್ಲಾಲು ಕರ್ನಾಟಕ ಬ್ಯಾಂಕ್‌ನ ಎದುರುಗಡೆ ಶ್ರೀ ರಮಾನಂದ ಇವರು ಕಟ್ಟಡ ಕಟ್ಟುತ್ತಿರುವುದು ಈ ಇಲಾಖೆಯ ಗಮನಕ್ಕೆ ಬಂದಿರುತ್ತದೆ. ಸದರಿಯವರಿಗೆ ರಸ್ತೆ ನಿಯಮಾವಳಿಗಳ ಪ್ರಕಾರ ತಿಳಿಹೇಳಿ ರಸ್ತೆಯ ಮಧ್ಯಭಾಗದಿಂದ 25.00 ಮೀಟರ್ ಅಂತರವನ್ನು ಬಿಟ್ಟು ಈ ಇಲಾಖೆಯಿಂದ ನಿರಾಕ್ಷೇಪಣಾ ಪತ್ರವನ್ನು ಪಡೆದುಕೊಂಡು ಕಟ್ಟಡವನ್ನು

ನಿರ್ಮಿಸಬಹುದಾಗಿ ತಿಳಿಸಲಾಗಿರುತ್ತದೆ. ಮತ್ತು ಕಾಮಗಾರಿ ನಿಲ್ಲಿಸುವಂತೆ ನೋಟೀಸು ನೀಡಲಾಗಿರುತ್ತದೆ.

4. ರಮಾನಂದ ಪಿ. ರವರು ಉತ್ತರವಾಗಿ ಕಟ್ಟಡ ಕಟ್ಟುತ್ತಿರುವ ಜಾಗವು ಪಟ್ಟಾ ಜಾಗವಾಗಿದ್ದು, ರಸ್ತೆಯ ಮಧ್ಯಭಾಗದಿಂದ 20.60 ಮೀಟರ್ ದೂರದಲ್ಲಿ ಕಟ್ಟಡವನ್ನು ಕಟ್ಟುತ್ತಿರುತ್ತೇನೆ ಎಂದು ಮತ್ತು ರಸ್ತೆಯ ಅಗಲೀಕರಣ ಸಮಯದಲ್ಲಿ ಬಿಟ್ಟುಕೊಡಬೇಕಾದ ಕಾನೂನು ಬಂದಲ್ಲಿ ನಾನು ಬದ್ಧನಾಗಿರುತ್ತೇನೆಂದು ತಿಳಿಸಿರುತ್ತಾರೆ.

5. ಕಟ್ಟಡ ಕಟ್ಟುತ್ತಿರುವ ಜಾಗವು ಶಿರ್ಲಾಲು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಬರುತ್ತಿದ್ದು, ಸದರಿಕಟ್ಟಡಕ್ಕೆ ಪರವಾನಗಿ ಮತ್ತು ಡೋರ್ ನಂಬರನ್ನು ಪಂಚಾಯತ್ ಅಭಿವೃದ್ಧಿ ಅಧಿಕಾರಿ ಮತ್ತು ಗ್ರಾಮ ಪಂಚಾಯತ್‌ನ ಆಡಳಿತವು ನಿರ್ಣಯ ಕೈಗೊಂಡು ಪರವಾನಗಿಯನ್ನು ಅಂಗೀಕರಿಸಿರುವುದರಿಂದ ಈ ಕಟ್ಟಡವನ್ನು ಪಂಚಯತ್ ವತಿಯಿಂದಲೇ ತೆರವುಗೊಳಿಸಬೇಕಾಗಿರುತ್ತದೆ ಎಂದು ನಮೂದಿಸಿರುತ್ತಾರೆ.

6. <u>2ನೇ ಎದುರುದಾರರ ಆಕ್ಷೇಪಣೆಗಳು:-</u>

ಉಡುಪಿ ಜಿಲ್ಲೆ, ಕಾರ್ಕಳ ತಾಲ್ಲೂಕು, ಶಿರ್ಲಾಲು ಗ್ರಾಮದ ಸರ್ವೆ ನಂ. 171/4 ವಿಸ್ತೀರ್ಣ 0.15 ಎಕರೆ ಕೃಷಿಯೇತರ ಸ್ಥಿರಾಸ್ತಿಯಲ್ಲಿ ಶಿರ್ಲಾಲು ಗ್ರಾಮದ ನಿವಾಸಿ ರಮಾನಂದ ಪಿ. ಯವರು ವಾಣಿಜ್ಯ ಕಟ್ಟಡ ನಿರ್ಮಿಸಲು ಪರವಾನಗಿ ಕೋರಿ ಸಲ್ಲಿಸಿದ ಅರ್ಜಿಯ ಮೇರೆಗೆ ಗ್ರಾಮ ಪಂಚಾಯತ್ ಸಾಮಾನ್ಯ ಸಭೆಯ ದಿನಾಂಕ: 17/11/2018 ರ ನಿರ್ಣಯದಂತೆ ವಾಣಿಜ್ಯ

ಉದ್ದೇಶ ಕಟ್ಟಡ ರಚನೆ ಮಾಡಲು ಪರವಾನಗಿಯನ್ನು ದಿನಾಂಕ: 19/11/2018 ರಂದು ನೀಡಲಾಗಿತ್ತು. ಸದ್ರಿ ರಮಾನಂದ ಪಿ. ಯವರಿಗೆ ದಿನಾಂಕ: 24/11/2018 ರಂದು ಗ್ರಾಮ ಪಂಚಾಯತ್ ನಿಂದ ನೋಟೀಸು ನೀಡಿ ತಕ್ಷಣ ಕಟ್ಟಡ ಕಾಮಗಾರಿಯನ್ನು ಸ್ಥಗಿತಗೊಳಿಸಿ, ರಸ್ತೆ ಮಾರ್ಜಿನ್ ನಿಯಮವನ್ನು ಪಾಲಿಸುವ ಬಗ್ಗೆ ಲೋಕೋಪಯೋಗಿ ಇಲಾಖೆಯಿಂದ ದೃಢ ಪತ್ರ ಒದಗಿಸುವಂತೆ ಸೂಚಿಸಲಾಗಿರುತ್ತದೆ. ದಿನಾಂಕ: 24/11/2018 ರಂದು ಗ್ರಾಮ ಪಂಚಾಯತ್ ನಿಂದ ಕಾರ್ಕಳ ತಹಶೀಲ್ದಾರರಿಗೆ ಪತ್ರ ಬರೆದು ಭೂ ದಾಖಲೆ ಅಧಿಕಾರಿಗಳಿಂದ ಜಮೀನಿನ ಸರ್ವೆ ನಡೆಸಿ ಸದ್ರಿ ರಮಾನಂದ ಪಿ. ಯವರು ಭೂ ಪರಿವರ್ತನೆಯಾದ ಅವರ ಪಟ್ಟಾ ಜಮೀನಿನಲ್ಲಿ ಕಟ್ಟಡ ನಿರ್ಮಾಣ ಮಾಡುತ್ತಿದ್ದಾರೆಯೇ ಅಥವಾ ಪರವಾನಗಿ ಶರ್ತವನ್ನು ಉಲ್ಲಂಘಿಸಿ ಸರಕಾರಿ ಜಮೀನಿನಲ್ಲಿ ಕಟ್ಟಡ ನಿರ್ಮಿಸುತ್ತಿದ್ದಾರೆಯೇ ಎಂಬ ಬಗ್ಗೆ ಸರ್ವೆ ನಡೆಸಿ ವರದಿ ನೀಡುವಂತೆ ಕೋರಲಾಗಿರುತ್ತದೆ.

7. ಸಹಾಯಕ ಇಂಜಿನಿಯರ್, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ನಂ. 3 ಉಪ ವಿಭಾಗ, ಕಾರ್ಕಳ ಇವರು ಸದ್ರಿ ಕಟ್ಟಡ ಕಾಮಗಾರಿಯನ್ನು ಸ್ಥಗಿತಗೊಳಿಸುವಂತೆ ನೋಟೀಸಿನಲ್ಲಿ ಸೂಚಿಸಿರುತ್ತಾರೆ. ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ರವರು ತಮ್ಮ ಪತ್ರ ದಿನಾಂಕ: 23/02/2019 ರಲ್ಲಿ ರಮಾನಂದ ಪಿ. ರವರು ರಸ್ತೆ ಮಾರ್ಜಿನ್ ನಿಯಮಾವಳಿ ಪ್ರಕಾರ ರಸ್ತೆ ಮಾರ್ಜಿನ್ ಅಂತರವನ್ನು ಬಿಟ್ಟಿರುವುದಿಲ್ಲ. ಸದ್ರಿ ಕಟ್ಟಡಕ್ಕೆ ಡೋರ್ ನಂಬರ್ ನೀಡುವ ವಿಚಾರವು ಗ್ರಾಮ ಪಂಚಯತ್ ವ್ಯಾಪ್ತಿಗೆ ಬರುವುದರಿಂದ ಗ್ರಾಮ ಪಂಚಾಯತ್‌ನಿಂದ ಸೂಕ್ತ ನಿರ್ಧಾರ ತೆಗೆದುಕೊಳ್ಳಬಹುದಾಗಿರುತ್ತದೆ ಎಂದು ತಿಳಿಸಿರುತ್ತಾರೆ.

8. ಸದ್ರಿ ಕಟ್ಟಡವು ಜಿಲ್ಲಾ ಪಂಚಾಯತ್ ರಸ್ತೆ ಮಧ್ಯ ಭಾಗದಿಂದ 20.61 ಮೀಟರ್ ದೂರದಲ್ಲಿರುತ್ತದೆ. ಗ್ರಾಮ ಪಂಚಾಯತ್ ಸಾಮಾನ್ಯ ಸಭೆ ದಿನಾಂಕ: 20/12/2018 ರಂದು ಈ ಕುರಿತು ನಿರ್ಣಯ ಪುಸ್ತಕದಲ್ಲಿ ನಾನು ಟಿಪ್ಪಣಿಯನ್ನು ಬರೆದಿದ್ದು ಸಭೆಯ ನಿರ್ಣಯದಂತೆ ಶರತ್ತುಗಳನ್ನು ವಿಧಿಸಿ ದಿನಾಂಕ: 08/03/2019 ರಂದು ಸದ್ರಿ ರಮಾನಂದ ಪಿ. ಯವರ ಕಟ್ಟಡಕ್ಕೆ ಕಟ್ಟಡ ನಂಬರ್ ಹಾಗೂ ವಿದ್ಯುತ್ ಸಂಪರ್ಕ ಪಡೆದುಕೊಳ್ಳಲು ನಿರಾಕ್ಷೇಪಣಾ ಪತ್ರ ನೀಡಿರುತ್ತೇನೆ ಎಂದು ನಮೂದಿಸಿರುತ್ತಾರೆ.

9. 1 ಮತ್ತು 2ನೇ ಎದುರುದಾರರು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಲಾಗಿರುತ್ತದೆ. ಶಿರ್ಲಾಲು ಗ್ರಾಮದ ಸರ್ವೆ ನಂ. 171/4 ವಿಸ್ತೀರ್ಣ 0.15 ಎಕರೆ ಸ್ವತ್ತಿನಲ್ಲಿ ಶ್ರೀ ರಮಾನಂದ ಪಿ. ರವರಿಗೆ ವಾಣಿಜ್ಯ ಕಟ್ಟಡ ಕಟ್ಟಲು ದಿನಾಂಕ: 19/11/2018 ರಂದು ಪರವಾನಗಿ ನೀಡಿದ್ದು ಸದರಿ ಪರವಾನಗಿಯಲ್ಲಿ ಕೆಲವು ಷರತ್ತುಗಳನ್ನು ವಿಧಿಸಿರುತ್ತಾರೆ. ಕಟ್ಟಡವನ್ನು ದಿನಾಂಕ: 19/11/2018 ರಿಂದ 18/11/2021 ರವರೆಗೆ ನಿರ್ಮಿಸಬೇಕೆಂದು ಜಿಲ್ಲಾ ಪಂಚಾಯತ್ ಮುಖ್ಯ ರಸ್ತೆಯಿಂದ 25 ಮೀಟರ್ ಒಳಗೆ ಯಾವುದೇ ಕಟ್ಟಡ ಕಟ್ಟಬಾರದೆಂದು ಷರತ್ತು ವಿಧಿಸಿರುವುದು ಕಂಡುಬಂದಿರುತ್ತದೆ. ಸದರಿ ಪರವಾನಗಿ ದಾಖಲೆಗೆ 2ನೇ ಎದುರುದಾರರ ಸಹಿ ಇರುತ್ತದೆ. ಸದರಿ ಶ್ರೀ ರಮಾನಂದ ಪೂಜಾರಿ ಇವರು ಗ್ರಾಮ ಪಂಚಾಯತ್ ಸದಸ್ಯರಿದ್ದು ಶಿರ್ಲಾಲು ಗ್ರಾಮದ ಸರಕಾರಿ ಜಾಗದಲ್ಲಿ ಅಕ್ರಮವಾಗಿ ರಸ್ತೆ ಮಧ್ಯದಿಂದ 20.60 ಮೀಟರ್ ಅಂತರದಲ್ಲಿ ಕಟ್ಟಡ ಕಟ್ಟುತ್ತಿದ್ದು ಭೂ ಪರಿವರ್ತನೆ ಮಾಡದ ಜಾಗದಲ್ಲಿ ಕಟ್ಟಡ ಕಟ್ಟುತ್ತಿದ್ದು ಪರವಾನಗಿ ನೀಡಿದ 2ನೇ ಎದುರುದಾರರು

ಕಟ್ಟಡ ಕಟ್ಟುವ ಪ್ರಾರಂಭದ ಹಂತದಲ್ಲಿಯೇ ಯಾವುದೇ ಕ್ರಮ ಜರುಗಿಸದೆ ಕರ್ತವ್ಯ ಲೋಪ ಎಸಗಿರುವುದು ಕಂಡುಬಂದಿರುತ್ತದೆ.

10. ಕಟ್ಟಡದ ಮಾಲೀಕರು ನಿಯಮಬಾಹಿರವಾಗಿ ಕಟ್ಟಡ ನಿರ್ಮಿಸಿದ್ದರೂ ಪಂಚಾಯ್ತಿಯಿಂದ ಕಟ್ಟಡ ಸಂಖ್ಯೆಯನ್ನು ನೀಡಿದ್ದು, ವಿದ್ಯುತ್ ಸಂಪರ್ಕ ಪಡೆಯಲು ನಿರಾಕ್ಷೇಪಣಾ ಪತ್ರ ನೀಡಿ 2ನೇ ಎದುರುದಾರರು ತಮಗಿರುವ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡಿರುವುದು ಸ್ಪಷ್ಟವಾಗಿ ಕಂಡುಬಂದಿರುತ್ತದೆ.

11. ಸದರಿ ಪ್ರಕರಣದಲ್ಲಿ ಎದುರುದಾರ 1 ಮತ್ತು 2 ಇವರು ಸಲ್ಲಿಸಿರುವ ಆಕ್ಷೇಪಣೆಗಳನ್ನು ಈ ಮೇಲ್ಕಾಣಿಸಿದ ಕಾರಣಗಳಿಗಾಗಿ ಒಪ್ಪಲು ಸಾಧ್ಯವಿರುವುದಿಲ್ಲ. ಏಕೆಂದರೆ, ಎದುರುದಾರ-1 ಇವರು ಕೇವಲ ಪಂಚಾಯತಿಗೆ ನೋಟೀಸ್‌ನ್ನು ನೀಡಿ ತೆರವುಗೊಳಿಸಲು ಸೂಕ್ತ ಕ್ರಮ ಜರುಗಿಸುವಂತೆ ಸೂಚಿಸಿದ್ದು, ಆದರೆ ರಸ್ತೆಯು ಸಾರ್ವಜನಿಕ ರಸ್ತೆಯಾಗಿದ್ದು ಮಾರ್ಜಿನ್ನಿನ ಅಂಶ ಮಧ್ಯ ರಸ್ತೆಯಿಂದ 25 ಮೀ. ಬಿಡಬೇಕಾಗಿದ್ದು, ಆದರೆ ಕೇವಲ 20.60 ಮೀ. ಅಂತರ ಬಿಟ್ಟಿದ್ದು, ಸದರಿ ಅಂಶವನ್ನು ಮನಗಂಡರು ಸಹ ಕ್ರಮ ಜರುಗಿಸಿರುವುದಿಲ್ಲ. ಹಾಗೇ ಎದುರುದಾರ-2 ಇವರು ಭೂಪರಿವರ್ತನಾದೇಶ ಆದ ನಂತರ ನಮೂದಿಸಿದ ಷರತ್ತುಗಳನ್ನು ಮತ್ತು ನಗರಾಭಿವೃದ್ಧಿ ಕೋಶದ ಆದೇಶಗಳನ್ನು ಪರಿಪಾಲಿಸಲಾಗಿದೆಯೇ ಹಾಗೂ 1ನೇ ಎದುರುದಾರನು ಕಟ್ಟಡವು ಮಾರ್ಜಿನ್‌ನಲ್ಲಿ ಬರುವುದಿಲ್ಲ ಎಂಬ ಬಗ್ಗೆ ಎನ್.ಓ.ಸಿ. ನೀಡಿದ್ದಾರೆ ಜೊತೆಗೆ ತನ್ನ ಪಂಚಾಯತಿ ವ್ಯಾಪ್ತಿಯಲ್ಲಿ ಕಟ್ಟಡ ನಿರ್ಮಾಣವಾಗುತ್ತಿದ್ದು, ಮಾರ್ಗಸೂಚಿಗಳನ್ನು ಅನುಸರಿಸಿ ನಿಯಮಗಳನ್ನು ಪಾಲಿಸಿ ಕಟ್ಟಡ ನಿರ್ಮಾಣ ಪ್ರಾರಂಭವಾಗಿದೆಯೇ ಎಂದು ಪರಿಶೀಲಿಸುವ

ವ್ಯಾಪ್ತಿ ಎದುರುದಾರ-2 ಇವರಿಗೆ ಇದ್ದು, ಪಂಚಾಯತಿ ಅಧ್ಯಕ್ಷರು, ಸದಸ್ಯರು ಠರಾವು ಪಾಸು ಮಾಡಿದ್ದನ್ನೆ ತನ್ನ ಆಕ್ಷೇಪಣೆಯಲ್ಲಿ ನಮೂದಿಸಿದ್ದು ಎದುರುದಾರ-2 ಇವರ ನಿರ್ಲಕ್ಷ್ಯ ಕಂಡುಬರುತ್ತದೆ. ಆದ್ದರಿಂದ ಮೇಲ್ಕಾಣಿಸಿದ ಕಾರಣಗಳಾಗಿ ಎದುರುದಾರ-1 ಮತ್ತು 2 ಇವರ ಆಕ್ಷೇಪಣೆಗಳನ್ನು ಒಪ್ಪಲು ಸಾಧ್ಯವಿಲ್ಲ.

12. ಸದರಿ ಪ್ರಕರಣದಲ್ಲಿ ಎದುರುದಾರ 1 ಸೋಮಶೇಖರ್ ಎ.ಇ.ಇ ಲೋಕೋಪಯೋಗಿ ಮತ್ತು ಒಳನಾಡು ಜಲಸಾರಿಗೆ ನಂ.3 ಉಪವಿಭಾಗ ಕಾರ್ಕಳ, ಉಡುಪಿ ರವರು ದಿ:21/11/2018 ರಂದು ಕಟ್ಟಡದ ಮಾಲೀಕರ ವಕೀಲರಿಗೆ ನೀಡಿದ ಸೂಚನಾ ಪತ್ರದನ್ವಯ ಕಾಮಗಾರಿಯನ್ನು ಕೂಡಲೇ ಸ್ಥಗಿತಗೊಳಿಸುವಂತೆ ತಿಳಿಸಿದ್ದು, ಕಟ್ಟಡದ ಮಾಲೀಕರು ತಮ್ಮ ವಕೀಲರ ಮುಖಾಂತರ ನೀಡಿದ ಸೂಚನಾ ಪತ್ರದನ್ವಯ ದಿ: 10/12/2018 ರಂದು ಕಟ್ಟಡದ ಕಾಮಗಾರಿಯನ್ನು ತಕ್ಷಣವೇ ಸ್ಥಗಿತಗೊಳಿಸುವಂತೆ ಸೂಚನಾ ಪತ್ರವನ್ನು ರವಾನಿಸಿರುತ್ತಾರೆ. ಆದರೆ ನಂತರದ ದಿನಗಳಲ್ಲಿ 1 ನೇ ಎದುರುದಾರನು ಯಾವುದೇ ಕ್ರಮವನ್ನು ಜರುಗಿಸದೇ ಹೋಗಿರುವುದು ಕಂಡುಬರುತ್ತದೆ. ದಿ: 04/10/2019 ರಂದು ತಮ್ಮ ಆಕ್ಷೇಪಣೆಯಲ್ಲಿ ಸದರಿ ಅಂಶಗಳನ್ನು ತಿಳಿಸಿದ್ದು, ಕಟ್ಟಡವನ್ನು ಕಟ್ಟಲು ಪಂಚಾಯತ್ ಅಭಿವೃದ್ಧಿ ಅಧಿಕಾರಿ ಪರವಾನಿಗೆ ನೀಡಿರುತ್ತಾರೆ. ಕಟ್ಟಡವನ್ನು ಪಂಚಾಯತ್ ವತಿಯಿಂದಲೇ ತೆರವುಗೊಳಿಸಬೇಕಾಗುತ್ತದೆ ಎಂದು ಹೇಳಿರುವ ಅಂಶವು ಸರಿಯಲ್ಲ.

13. 1ನೇ ಎದುರುದಾರನು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರನಾಗಿರುವುದಿಲ್ಲ. ಆದರೆ ಸಹಾಯಕ ಅಭಿಯಂತರರಾಗಿ (ಎ.ಇ)

ಕೆಲಸ ನಿರ್ವಹಿಸಿ ಸದರಿ ರಸ್ತೆಯ ಉಸ್ತುವಾರಿ ಅಭಿಯಂತರನಾಗಿರುತ್ತಾನೆ. ಸದರಿ ಅಂಶವನ್ನು ಕೆ.ಹೆಚ್.ಸುಂದರ್ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು ಇವರು ಸಲ್ಲಿಸಿದ ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ.

14. ಸದರಿ ಪ್ರಕರಣದಲ್ಲಿ ಲೋಕೋಪಯೋಗಿ ಇಲಾಖೆ ರಸ್ತೆಗೆ ಮಾರ್ಜಿನ್‌ನ್ನು ಬಿಡದೇ ಕಟ್ಟಡ ನಿರ್ಮಿಸುತ್ತಿರುವ ಸಂದರ್ಭದಲ್ಲಿ 1 ನೇ ಎದುರುದಾರನು ಯಾವುದೇ ಕ್ರಮವನ್ನು ಜರುಗಿಸದೇ ಹೋಗಿರುವುದು ಕಂಡುಬರುತ್ತದೆ. ಆದರೆ ಕಟ್ಟಡದ ನಿರ್ಮಾಣದ ನಂತರ ಮೇಲಾಧಿಕಾರಿಗಳಿಗೆ ವರದಿಯನ್ನು ಮಾಡಿರುವುದು ದಾಖಲೆಯಿಂದ ಕಂಡುಬರುತ್ತದೆ. ಆದರೆ 1 ನೇ ಎದುರುದಾರನ ಪರವಾಗಿ ಆಕ್ಷೇಪಣೆಯನ್ನು ಸಲ್ಲಿಸಿದ ಕೆ.ಹೆಚ್.ಸುಂಧರ್ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಲ್ಲಿಗೆ ಯಾವ ದಿನಾಂಕದಂದು ವರದಿಯನ್ನು ನೀಡಿದ್ದಾರೆಂಬುದು ತಿಳಿಸಿರುವುದಿಲ್ಲ.

15. 1 ನೇ ಎದುರುದಾರನ ಪರವಾಗಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಆಕ್ಷೇಪಣೆಯನ್ನು ಸಲ್ಲಿಸಿರುವುದ ಕಡತದಿಂದ ಕಂಡುಬರುತ್ತದೆ. ಆದರೆ ಲೋಕೋಪಯೋಗಿ ಇಲಾಖೆಯ ಕಾನೂನಿನನ್ವಯ ಕರ್ನಾಟಕ ಹೈವೆ ಅದಿನಿಯಮ 1964 ರ ಅನ್ವಯ ಕ್ರಮ ಕೈಗೊಳ್ಳುವುದು 1 ನೇ ಎದುರುದಾರನ ಕರ್ತವ್ಯವಾಗಿರುತ್ತದೆ. ಆದರೆ 1 ನೇ ಎದುರುದಾರನು ಸದರಿ ಕರ್ತವ್ಯವನ್ನು ನೆರವೇರಿಸಿರುವುದಿಲ್ಲ. ಈ ಕಾರಣಕ್ಕಾಗಿ ಎದುರುದಾರ 1 ರ ಪರವಾಗಿ ಸಲ್ಲಿಸಿರುವ ಆಕ್ಷೇಪಣೆ ಯಲ್ಲಿ ತಾನು ಕ್ರಮ ಕೈಗೊಂಡಿರುತ್ತೇನೆ ಎಂಬಂತೆ ಎಲ್ಲಿಯೂ ನಮೂದಿಸಿರುವುದಿಲ್ಲ. ಆದ್ದರಿಂದ ಕರ್ನಾಟಕ ಹೈವೆ ಅದಿನಿಯಮ 1964 ರ ಅನ್ವಯ ಕ್ರಮ ಕೈಗೊಳ್ಳದೇ ಹೋಗಿರುವುದು ಕಂಡು ಬರುತ್ತದೆ.

16. ಎದುರುದಾರ-1 ಮತ್ತು 2 ಇವರು ತಮ್ಮ ಕರ್ತವ್ಯದಲ್ಲಿ ನಿರ್ಲಕ್ಷ್ಯ ತೋರಿದ್ದು, ಅಲ್ಲದೇ ಸರ್ಕಾರಕ್ಕೆ ಸೇರಿದ ಮಾರ್ಜಿನ್ ರಸ್ತೆಯನ್ನು ಅತಿಕ್ರಮಣ ಮಾಡಿಕೊಂಡು ಕಟ್ಟಡದ ಮಾಲೀಕರು ಕಟ್ಟಡ ಕಟ್ಟಿಕೊಳ್ಳಲು ಕಾರಣಕರ್ತರಾಗಿರುವುದರಿಂದ ತಮ್ಮ ಕರ್ತವ್ಯದಲ್ಲಿ ದುರ್ನಡತೆ ತೋರಿರುವುದು ಸಾಬೀತಾಗಿರುವುದರಿಂದ ಎದುರುದಾರ 1 ಮತ್ತು 2 ಇವರ ವಿರುದ್ಧ ಲೋಕಾಯುಕ್ತ ಕಾಯಿದೆ ಅನ್ವಯ ಕ್ರಮ ಜರುಗಿಸಬಹುದಾಗಿದೆ.

17. ಮೇಲೆ ಚರ್ಚಿಸಲಾದ ಕಾರಣಗಳ ಹಿನ್ನಲೆಯಲ್ಲಿ ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966ರ ನಿಯಮಗಳು 3(1) (i) ರಿಂದ (iii) ರನ್ವಯ **ಎದುರುದಾರರಾದ** (1) ಶ್ರೀ ಸೋಮಶೇಖರ್, ಸಹಾಯಕ ಇಂಜಿನಿಯರ್, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ನಂ.3 ಉಪವಿಭಾಗ ಕಾರ್ಕಳ, ಉಡುಪಿ ಜಿಲ್ಲೆ, (2) ಶ್ರೀ ಸಂಗಮೇಶ ಬಣಕಾರ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಶಿರ್ಲಾಲು ಗ್ರಾಮ, ಕಾರ್ಕಳ ತಾಲ್ಲೂಕು, ಉಡುಪಿ ಜಿಲ್ಲೆ ಇವರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು "ಉಪಲೋಕಾಯುಕ್ತರಿಗೆ" ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

18. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(4) ರ ಪ್ರಕಾರ, ಸಕ್ಷಮ ಪ್ರಾಧಿಕಾರವು ಈ ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ

ದಿನಾಂಕದಿಂದ ಮೂರು ತಿಂಗಳೊಳಗಾಗಿ ಈ ಪ್ರಾಧಿಕಾರಕ್ಕೆ ವರದಿ ಮಾಡಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿದೆ.

5/1/21

[ನ್ಯಾಯಮೂರ್ತಿ ಬಿ.ಎಸ್. ಪಾಟೀಲ]
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ, ಬೆಂಗಳೂರು.**